## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ:ಕೇಂದ್ರ ಕಛೇರಿ: ಬೆಂಗಳೂರು

## ಪತ್ರಿಕಾ ಪ್ರಕಟಣೆ

**ದಿನಾಂಕ 23.10.2017 ರಂದು ಕೆಎಸ್‌ಆರ್‌ಟಿಸಿ ಕೇಂದ್ರ ಕಛೇರಿಯಲ್ಲಿ ಮಾನ್ಯ ಸಾರಿಗೆ ಸಚಿವರಾದ ಶ್ರೀ ಹೆಚ್.ಎಂ. ರೇವಣ್ಣರವರು ಕೆಎಸ್‌ಆರ್‌ಟಿಸಿಯ ಎಲ್ಲಾ 14 ವಿಭಾಗಗಳ ವಿಭಾಗೀಯ ನಿಯಂತ್ರಣಾಧಿಕಾರಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳ ಉಪಸ್ಥಿತಿಯೊಂದಿಗೆ ನಿಗಮದ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿದರು.** ಸಭೆಯಲ್ಲಿ ಶ್ರೀ ಕೆ.ಗೋಪಾಲ ಪೂಜಾರಿ, ಮಾನ್ಯ ಅಧ್ಯಕ್ಷರು, ಕೆಎಸ್‌ಆರ್‌ಟಿಸಿ, ಶ್ರೀ.ಬಸವರಾಜ ಬುಳ್ಳಾ, ಮಾನ್ಯ ಉಪಾಧ್ಯಕ್ಷರು, ಕೆಎಸ್‌ಆರ್‌ಟಿಸಿ, ಶ್ರೀ ಎಸ್.ಆರ್. ಉಮಾಶಂಕರ್, ಭಾಆಸೇ., ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ, ಹಾಗೂ ಶ್ರೀ ರವಿ ಎಸ್ ನಿರ್ದೇಶಕರು (ಸಿ&ಪ) ಹಾಗೂ ಪ್ರಕಾರ್ಯ ನಿರ್ದೇಶಕರುಗಳು ಭಾಗವಹಿಸಿದ್ದರು.

ಇದೇ ಸಂಧರ್ಭದಲ್ಲಿ ವಿಶ್ವ ಪೊಲೀಸ್ ಟೆನ್ನಿಸ್ ಟೂರ್ನಿ ಚಿನ್ನದ ಪದಕವನ್ನು ಪಡೆದಿರುವ ಶ್ರೀ.ಬಿ.ಎನ್.ಎಸ್, ರೆಡ್ಡಿ, ಭಾಪೊಸೇ., ನಿರ್ದೇಶಕರು (ಭ&ಜಾ), ಕರಾರಸಾ.ನಿಗಮ ರವರಿಗೆ ನಿಗಮದ ವತಿಯಿಂದ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕ.ರಾ.ರ.ಸಾ ನಿಗಮದ 2017–18ನೇ ಸಾಲಿನ ಸೆಪ್ಟೆಂಬರ್‌ನ ವರೆಗಿನ ಪ್ರಮುಖಾಂಶಗಳ ಸಾಧನೆಗಳ ವಿವರ ಈ ಕೆಳಕಂಡಂತಿದೆ:

- ನಿಗಮವು ಪ್ರಸ್ತುತ 16 (ಕೆ.ಬಿ.ಎಸ್ ವಿಭಾಗ ಸೇರಿ) ವಿಭಾಗಗಳು, 83 ಘಟಕಗಳು ಮತ್ತು 152 ಬಸ್ ನಿಲ್ದಾಣಗಳನ್ನು ಹೊಂದಿರುತ್ತದೆ. ಸೆಪ್ಟೆಂಬರ್–2017ರ ಅಂತ್ಯಕ್ಕೆ 8011 ಅನುಸೂಚಿಗಳನ್ನು, 8506 ವಾಹನಗಳ ಮೂಲಕ ಕಾರ್ಯಾಚರಣೆ ನಡೆಸಿ, ಪ್ರತಿ ದಿನ 28.44 ಲಕ್ಷ ಕಿ.ಮೀ. ಕ್ರಮಿಸಿ, ರೂ.894.64 ಲಕ್ಷ ಆದಾಯ ಗಳಿಸುತ್ತಿದ್ದು, ಪ್ರತಿದಿನ ಸುಮಾರು 27.20 ಲಕ್ಷ ಪ್ರಯಾಣಿಕರು ನಿಗಮದ ವಾಹನಗಳಲ್ಲಿ ಸಂಚರಿಸುತ್ತಿರುತ್ತಾರೆ. ನಿಗಮದ ಪ್ರತಿ ಅನುಸೂಚಿಗೆ ಸಿಬ್ಬಂದಿ ಪ್ರಮಾಣವು 4.79 ರಷ್ಟು ಇರುತ್ತದೆ.

- ನಿಗಮವು ಪ್ರಸಕ್ತ ಅವಧಿಯಲ್ಲಿ ಸೆಪ್ಟೆಂಬರ್–2017ರ ಅಂತ್ಯಕ್ಕೆ **151 ವಿವಿಧ ಹೊಸ ಅನುಸೂಚಿಗಳನ್ನು** ಸೇರ್ಪಡೆಗೊಳಿಸಿರುತ್ತದೆ. ಕಳೆದ ಸಾಲಿನ **ಇದೇ ಅವಧಿಯಲ್ಲಿ 40 ಹೊಸ ಅನುಸೂಚಿಗಳನ್ನು** ಸೇರ್ಪಡೆಗೊಳಿಸಿತ್ತು.

- ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಇಂದಿರಾ ಕ್ಯಾಂಟೀನ್ ಗಳನ್ನು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿಯೂ ಆರಂಭಿಸಲಾಗುತ್ತದೆ .ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಾರಿಗೆ ಸಚಿವ ಹೆಚ್.ಎಂ.ರೇವಣ್ಣ, ರಾಜ್ಯದ ಪಟ್ಟಣ,ನಗರ,ತಾಲ್ಲೂಕು ಕೇಂದ್ರದಲ್ಲಿ ಇಂದಿರಾ ಕ್ಯಾಂಟೀನ್ ಆರಂಭಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.ಅದಕ್ಕೆ ಪೂರಕವಾಗಿ ರಾಜ್ಯದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಇಂದಿರಾ ಕ್ಯಾಂಟೀನ್ ಆರಂಭಕ್ಕೆ ಜಾಗ ನೀಡಲು ನಿರ್ಧರಿಸಿದ್ದೇವೆ. ನಮ್ಮ ಕ್ಯಾಂಟೀನ್ ಗಳಿಗೆ ತೊಂದರೆಯಾಗದಂತೆ ಇಂದಿರಾ ಕ್ಯಾಂಟೀನ್ ಆರಂಭಕ್ಕೆ ಅವಕಾಶ ನೀಡುತ್ತೇವೆ, ಆದರೆ ಎಲ್ಲಾ ನಿಲ್ದಾಣಗಳ ಬದಲು ಬೇಡಿಕೆ ಬಂದ ಕಡೆ ಆಧ್ಯತೆ ಮೇರೆಗೆ ಕ್ಯಾಂಟೀನ್ ಆರಂಭಿಸಲಿದ್ದೇವೆ ಎಂದರು.

- ಪ್ರಯಾಣಿಕರ ಮಾಹಿತಿಗಾಗಿ ಬಸ್ ನಿಲ್ದಾಣಗಳಲ್ಲಿ ಡಿಜಿಟಲ್ ಮಾಹಿತಿ ಫಲಕ ಅಳವಡಿಸುತ್ತೇವೆ. ಬಸ್ ವೇಳಾಪಟ್ಟಿ ಆಗಮನ,ನಿರ್ಗಮನದ ಮಾಹಿತಿಯನ್ನು ಪ್ರಕಟಿಸಲು ನಿರ್ಧಾರಿಸಿದ್ದು ಅದನ್ನು ಪರಿಣಾಮಕಾರಿ ಅನುಷ್ಠಾನಕ್ಕೆ ತರಲು ನಿರ್ಧಾರಿಸಲಾಗಿದೆ ಎಂದರು.

- ಸಧ್ಯ ಎಸಿ ಬಸ್ ಗಳಲ್ಲಿ ಕುಡಿಯುವ ನೀರು ಕೊಡಲಾಗುತ್ತಿದ. ಆದರೆ ಬಸ್ ನಿಲ್ದಾಣದಲ್ಲಿಯೂ ಕುಡಿಯುನ ನೀರಿನ ಪೂರೈಕೆಗೆ ಬೇಡಿಕೆ ಬಂದಿದೆ.ಹಾಗಾಗಿ ರಾಜ್ಯದ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲಿದ್ದು, ಶೌಚಾಲಯಗಳ ಶುಚಿತ್ವಕ್ಕೆ ಆಧ್ಯತೆ ನೀಡುತ್ತೇವೆ.ಈ ಸಂಬಂಧ ಜನರಿಂದ ಬಂದ ದೂರಿನ ಮೇರೆಗೆ ಅಗತ್ಯ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದರು.

- ಪೀಣ್ಯದಲ್ಲಿರುವ ಬಸವೇಶ್ವರ ಬಸ್ ಟರ್ಮಿನಲ್ ಸ್ಥಗಿತಗೊಂಡಿದ್ದು, ಕೆಎಸ್‌ಆರ್‌ಟಿಸಿ ಜೊತೆಗೆ ಎರಡು ಹಂತದಲ್ಲಿ ಬಿಎಂಟಿಸಿ ಲಿಂಕ್ ಹಾಗು ಮೆಟ್ರೋ ಫೀಡರ್ ಸರ್ವೀಸ್ ಕಲ್ಪಿಸಲು ನಿರ್ಧಾರ ಕೈಗೊಂಡಿದ್ದೇವೆ.
- 53 ಕೋಟಿ ವೆಚ್ಚದಲ್ಲಿ ಆರು ಹೊಸ ಬಸ ನಿಲ್ದಾಣ ನಿರ್ಮಾಣ, ಹರಿಹರ,ಕೋಲಾರ, ದೊಡ್ಡಬಳ್ಳಾಪುರ ಸೇರಿ 21 ಬಸ್ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲಿದ್ದು,
- ಮಂಗಳೂರಿನಲ್ಲಿ ಟ್ರಾನ್ಸ್ ಪೋರ್ಟ್ ಹಬ್ ಮಾಡಲು ನಿರ್ಧಾರ ಕೈಗೊಂಡಿದ್ದೇವೆ ಎಂದರು.
- ಮುಂಗಡ ಆಸನ ಕಾಯ್ದಿರಿಸುವವರಿಗೆ ಅವತಾರ್ ಮೂಲಕ ಮೊಬೈಲ್ ಫೋನ್ ನಲ್ಲೇ ಟಿಕೆಟ್ ಪ್ರತಿ ಸಿಗುವಂತೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಪೇಪರ್ ಲೆಸ್ ಟಿಕೆಟ್ ವ್ಯವಸ್ಥೆಗೆ ಇದು ಪೂರಕವಾಗಲಿದೆ. ಜೊತೆಗೆ ಮೈಸೂರು ರೀತಿಯಲ್ಲಿ ಎಲ್ಲಾ ಬಸ್ ಗಳಿಗೂ ಜಿಪಿಎಸ್ ಅಳವಡಿಕೆಗೆ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

- **ಕೆಎಸ್‌ಟಿಡಿಸಿಯ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಯೋಜನೆ :**

➢ ಕೆಎಸ್‌ಟಿಡಿಸಿಯ ಪ್ಯಾಕೇಜ್ ಟೂರ್‌ಗಳನ್ನು ಕರಾರಸಾನಿಗಮದ ವೆಬ್‌ಸೈಟ್‌ನಲ್ಲಿ ಬುಕಿಂಗ್ ಮಾಡಲು ಅವಕಾಶ (API ಮುಖಾಂತರ).

➢ ಕೆಎಸ್‌ಟಿಡಿಸಿ ರವರಿಗೆ ಒಪ್ಪಂದದ ಆಧಾರದಲ್ಲಿ ಕರಾರಸಾ ನಿಗಮವು ಬಸ್ಸುಗಳನ್ನು ಒದಗಿಸುವುದು.

**ಬಸ್ ನಿಲ್ದಾಣಗಳ ನಿರ್ವಹಣೆಯನ್ನು ಮೆ॥ ಸುಲಭ್ ಇಂಟರ್ ನ್ಯಾಷನಲ್‌ರವರಿಗೆ ವಹಿಸುವ ಕುರಿತು:**

➢ ಸುಲಭ್ ಇಂಟರ್ ನ್ಯಾಷನಲ್ ಒಂದು ಸರ್ಕಾರೇತರ ಸಾಮಾಜಿಕ ಸೇವಾ ಸಂಸ್ಥೆಯಾಗಿದ್ದು ವಾಣಿಜ್ಯೇತರ (Non Commercial) ಸ್ವಚ್ಛತಾ ನಿರ್ವಹಣಾ ಕಾರ್ಯದಲ್ಲಿ ನೈಪುಣ್ಯತೆ ಹೊಂದಿದ್ದು, ಈ ಕಾರ್ಯದಲ್ಲಿ ಉತ್ತಮ ಸೇವೆ ನೀಡುವ ಸಂಸ್ಥೆಯಾಗಿರುತ್ತದೆ. ಬಸ್ ನಿಲ್ದಾಣಗಳ ಸ್ವಚ್ಛತಾ ನಿರ್ವಹಣಾ ಕಾರ್ಯವನ್ನು ಈ ಸಂಸ್ಥೆಯವರಿಗೆ ನೀಡುವುದರಿಂದ ಬಸ್ ನಿಲ್ದಾಣಗಳ ಸ್ವಚ್ಛತೆಯನ್ನು ಉತ್ತಮವಾಗಿ ಇಟ್ಟುಕೊಳ್ಳಲು ಸಹಕಾರಿಯಾಗುವುದಲ್ಲದೆ ಪ್ರಯಾಣಿಕರಿಗೆ ಉತ್ತಮ ಸೌಲಭ್ಯ ಒದಗಿಸಲು ಸಹಕಾರಿಯಾಗಲಿದೆ.

➢ ಪ್ರಾರಂಭಿಕವಾಗಿ ಬೆಂಗಳೂರು ಕೇಂದ್ರೀಯ, ರಾಮನಗರ ಮತ್ತು ಮಂಡ್ಯ ವಿಭಾಗಗಳ ಬಸ್ ನಿಲ್ದಾಣಗಳ ಸ್ವಚ್ಛತಾ ನಿರ್ವಹಣೆವನ್ನು ಮೆ: ಸುಲಭ್ ಇಂಟರ್ ನ್ಯಾಷನಲ್‌ರವರಿಗೆ ವಹಿಸಲು ನಿಗಮವು ಉದ್ದೇಶಿಸಿರುತ್ತದೆ.

**ಶುದ್ಧ ಕುಡಿಯುವ ನೀರಿನ ಘಟಕ**

- ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಈ ಕೆಳಕಂಡ 12 ಬಸ್ ನಿಲ್ದಾಣಗಳಲ್ಲಿ ಆರ್.ಡಿ.ಪಿ.ಆರ್ ವತಿಯಿಂದ ಮೆ॥ ವಾಟರ್ ಲೈಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ರವರ ಮುಖಾಂತರ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಲಾಗಿರುತ್ತದೆ.

➢ ಕೆ.ಜಿ.ಎಫ್ ಬಸ್ ನಿಲ್ದಾಣ, ಮಲೇಬೆನ್ನೂರು, ಕಳ್ಳಂಬೆಳ್ಳ, ಹಳೇಬೀಡು, ಗಂಡಸಿ, ಬನ್ನೂರು ,ಕೊಣನೂರು, ಗೋರೂರು, ನಿಟ್ಟೂರು, ದೊಡ್ಡಮರಳವಾಡಿ, ಹಾರೋಹಳ್ಳಿ, ಬೇಗೂರು

➢ ಇದಲ್ಲದೆ, ನಿಗಮವು ತಾಲ್ಲೂಕು ಬಸ್ ನಿಲ್ದಾಣಗಳಲ್ಲಿ ಮೆ॥ ಬಿ.ಪಿ.ಸಿ.ಎಲ್. ವತಿಯಿಂದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ಯೋಜಿಸಿದೆ.

➢ ಮೊದಲನೇ ಹಂತದಲ್ಲಿ ಪಾಂಡವಪುರ. ನಾಗಮಂಗಲ, ಮಳವಳ್ಳಿ, ಶ್ರೀರಂಗಪಟ್ಟಣ, ಮೇಲುಕೋಟೆ, ಕೆ.ಆರ್.ಪೇಟೆ, ಹರಪನಹಳ್ಳಿ, ಹರಿಹರ, ಹೊನ್ನಾಳಿ, ಜಗಳೂರು, ಭದ್ರಾವತಿ, ಹಿರಿಯೂರು, ಧರ್ಮಸ್ಥಳ, ಸುಬ್ರಹ್ಮಣ್ಯ, ಕುಂದಾಪುರ ಈ ಸ್ಥಳಗಳಲ್ಲಿ ಅಳವಡಿಸಲು ಯೋಜಿಸಿದೆ.

➢ ಪ್ರಯಾಣಿಕರು ರೂ. 1.00ನ್ನು ಪಾವತಿಸಿ ಒಂದು ಲೀಟರ್ ನೀರನ್ನು ಪಡೆಯಬಹುದಾಗಿದೆ.

➢ ಮಾರ್ಚ್ 2018ರೊಳಗೆ ಸದರಿ ಸೌಲಭ್ಯವನ್ನು ಅಳವಡಿಸಲಾಗುವುದು.

**ಸಿಸಿಟಿವಿ ಕ್ಯಾಮರ ಅಳವಡಿಕೆ**

ಕ.ರಾ.ರ.ಸಾ. ನಿಗಮಕ್ಕೆ ಸಂಬಂಧಿಸಿದಂತೆ, ಘಟಕಗಳು, ವಿಭಾಗೀಯ ಕಾರ್ಯಾಗಾರ ಹಾಗೂ ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಸಿಸಿಟಿವಿ ಅಳವಡಿಸಲು ಉದೇಶಿಸಿದ್ದು ಈ ಸಂಬಂಧ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ದರ ಸಂಧಾನ ಮಾಡಿ ಸಿಸಿಟಿವಿ ಅಳವಡಿಸಲು "ಮೆ.ನೆಟ್ ಸೇವಾ ಸಲ್ಯೂಷನ್ಸ್", ಬೆಂಗಳೂರು ಇವರಿಗೆ ಆದೇಶ ನೀಡಲಾಗಿರುತ್ತದೆ ಹಾಗೂ ಸದರಿಯವರು ಸಿಸಿಟಿವಿ ಅಳವಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸಿರುತ್ತಾರೆ. 160 ಬುಲೆಟ್ ಕ್ಯಾಮೆರಾ ಮತ್ತು 24 ಡೋಮ್ ಕ್ಯಾಮರಾಗಳನಗನು ಅಳವಡಿಸಲಾಗುತ್ತದೆ.

- ಪ್ರಸಕ್ತ ಸಾಲಿನ ಅವಧಿಯಲ್ಲಿ ನಿಗಮವು 1701 ಹೊಸ ವಾಹನಗಳನ್ನು ಸೇರ್ಪಡೆಗೊಳಿಸುವ ಗುರಿಯನ್ನು ಹೊಂದಿದ್ದು, **ಸೆಪ್ಟೆಂಬರ್-2017ರ ಅಂತ್ಯಕ್ಕೆ 567 ವಿವಿಧ ಮಾದರಿಯ ಹೊಸ ವಾಹನಗಳನ್ನು** ಸೇರ್ಪಡೆಗೊಳಿಸಿರುತ್ತದೆ. ಕಳೆದ ಸಾಲಿನ ಇದೇ ಅವಧಿಯಲ್ಲಿ ನಿಗಮವು 441 ಹೊಸ ವಾಹನಗಳನ್ನು ಸೇರ್ಪಡೆಗೊಳಿಸಿತ್ತು.
- ಸೆಪ್ಟೆಂಬರ್-2017ರ ಅಂತ್ಯಕ್ಕೆ ನಿಗಮದ ವಾಹನ ಸಮೂಹ ಬಳಕೆಯು ಶೇಕಡ 92.9 ರಷ್ಟಿದ್ದು, ಕಳೆದ ಸಾಲಿನ ಇದೇ ಅವಧಿಯಲ್ಲಿ ಶೇಕಡ 89.9ರಷ್ಟಿತ್ತು.
- ನಿಗಮದ ಕಳೆದ ಸಾಲಿನ ಅವಧಿಯಲ್ಲಿನ ವಾಹನ ಉಪಯುಕ್ತತೆಯು 362 ಕಿ.ಮೀ.ಗಳಷ್ಟಿದ್ದು, ಪ್ರಸಕ್ತ ಸಾಲಿನ ಅವಧಿಯಲ್ಲಿ 364 ಕಿ.ಮೀ. ಗಳಿಸಿ ಉತ್ತಮಗೊಂಡಿರುತ್ತದೆ.
- ನಿಗಮದ ಶೇ. ರದ್ಧತಿ ಕಿ.ಮೀ. ಕಳೆದ ಸಾಲಿನ ಅವಧಿಯಲ್ಲಿ 6.5ರಷ್ಟಿದ್ದು, ಪ್ರಸಕ್ತ ಸಾಲಿನ ಅವಧಿಯಲ್ಲಿ ಶೇ.2.6ರಷ್ಟಾಗಿರುತ್ತದೆ.
- ನಿಗಮದ ಒಟ್ಟಾರೆ ಹೊಸ ಟೈರ್ ಸಾಧನೆಯು 2016-17ನೇ ಸಾಲಿನಲ್ಲಿ 79197 ಕಿ.ಮೀ., ಸಂಸ್ಕರಣೆಗೊಂಡ ಟೈರ್ ಸಾಧನೆ 45514 ಕಿ.ಮೀ. ಒಟ್ಟಾರೆ ಟೈರ್ ಸಾಧನೆ 194736 ಕಿ.ಮೀ.ಯಷ್ಟು ಸಾಧನೆಗೊಂಡಿದ್ದು, ಪ್ರಸ್ತುತ ಜೂನ್-17ರ ಅಂತ್ಯಕ್ಕೆ ಹೊಸ ಟೈರ್ ಸಾಧನೆಯು 84478 ಕಿ.ಮೀ., ಸಂಸ್ಕರಣೆಗೊಂಡ ಟೈರ್ ಸಾಧನೆ 48831 ಕಿ.ಮೀ. ಒಟ್ಟಾರೆ ಟೈರ್ ಸಾಧನೆ 209288 ಕಿ.ಮೀ. ಗಳಿಸಿ, ಉತ್ತಮ ಸಾಧನೆ ಮಾಡಿರುತ್ತದೆ. ಇದರಿಂದಾಗಿ ನಿಗಮದ ಟೈರ್ ವೆಚ್ಚದಲ್ಲಿ ಇಳಿಮುಖವಾಗಿರುತ್ತದೆ.
- ಸಿಬ್ಬಂದಿ ಉತ್ಪಾದಕತೆಯು 71.3 ಕಿ.ಮೀ.ಯಿಂದ 74.1 ಕಿ.ಮೀ. ಸಾಧಿಸಿ ಉತ್ತಮಗೊಂಡಿರುತ್ತದೆ.
- ಕಳೆದ ಸಾಲಿನ ಅವಧಿಯಲ್ಲಿ ನಿಗಮದ ಅಪಘಾತ ಪ್ರಮಾಣವು 0.11ರಷ್ಟಿದ್ದು, ಪ್ರಸ್ತುತ 0.10ರಷ್ಟಾಗಿದ್ದು, ಕಡಿಮೆಯಾಗಿರುತ್ತದೆ.
- ಪ್ರಸಕ್ತ ಸಾಲಿನ ಅವಧಿಯಲ್ಲಿ ನಿಗಮವು 52.04 ಕೋಟಿ ಕಿ.ಮೀ.ಗಳನ್ನು ಆಚರಿಸಿ ಕಳೆದ ಸಾಲಿನ ಅವಧಿಯಲ್ಲಿ ಆಚರಿಸಿದ ಕಿ.ಮೀ.ಗಿಂತ ಶೇಕಡ 8.2ರಷ್ಟು ಉತ್ತಮಗೊಂಡಿರುತ್ತದೆ.
- ನಿಗಮವು ಪ್ರಸಕ್ತ ಸಾಲಿನ ಅವಧಿಯಲ್ಲಿ ಒಟ್ಟಾರೆ ರೂ.1637.20 ಕೋಟಿ ಆದಾಯವನ್ನು ಗಳಿಸಿದ್ದು, ಕಳೆದ ಸಾಲಿನ ಇದೇ ಅವಧಿಯಲ್ಲಿ ನಿಗಮವು ರೂ.1511.68 ಕೋಟಿ ಆದಾಯವನ್ನು ಗಳಿಸಿತ್ತು. ಆದಾಯ ಗಳಿಕೆಯಲ್ಲಿ ನಿಗಮವು ಶೇ.8.3ರಷ್ಟು ಅಧಿಕ ಸಾಧನೆ ಮಾಡಿರುತ್ತದೆ.
- **ಸೆಪ್ಟೆಂಬರ್-2017ರ ಅಂತ್ಯಕ್ಕೆ ಒಟ್ಟು ಆದಾಯಕ್ಕೆ ರೂ. 72.57 ಕೋಟಿ ನಷ್ಟವನ್ನು ಅನುಭವಿಸಿದ್ದು,** ಕಳೆದ ಸಾಲಿನ ಇದೇ ಅವಧಿಯಲ್ಲಿ ರೂ.77.20 ಕೋಟಿ ನಷ್ಟವನ್ನು ಅನುಭವಿಸಿತ್ತು, ಇದರಿಂದಾಗಿ ನಿಗಮದ ನಷ್ಟದ ಪ್ರಮಾಣದಲ್ಲಿ ರೂ.4.63 ಕೋಟಿ ರಷ್ಟು ಇಳಿಕೆಯಾಗಿರುತ್ತದೆ.
- ನೇರ ನೇಮಕಾತಿಗೆ ಮೀಸಲಾಗಿರುವ ಅಧಿಕಾರಿ/ಮೇಲ್ವಿಚಾರಕ/ಮೇಲ್ವಿಚಾರಕೇತರ ಒಟ್ಟು **1271 ಹುದ್ದೆಗಳನ್ನು ಭರ್ತಿ ಮಾಡಲು ಜಾಹೀರಾತು ಹೊರಡಿಸಲಾಗಿದ್ದು,** ಪ್ರಕ್ರಿಯೆ ಪ್ರಗತಿಯಲ್ಲಿದೆ.
- ತಿರುಪತಿ ಪ್ಯಾಕೇಜ್ ಟೂರ್ ಗೆ ಬೇಡಿಕೆ ಹೆಚ್ಚಾಗಿದೆ. ಹಾಗಾಗಿ ಇನ್ನಷ್ಟು ಬಸ್ ಗಳನ್ನು ತಿರುಪತಿ ಪ್ಯಾಕೇಜ್ ಟೂರ್ ಗೆ ಪರಿಚಯಿಸುತ್ತಿದ್ದೇವೆ ಎಂದರು.

## ಹೊಸ ಬಸ್ಸುಗಳ ಸೇರ್ಪಡೆ

| Month | Chassis | Fully Built Buses |
|---|---|---|
| Oct-17 | 45 | 76 |
| Nov-17 | 105 | 176 |
| Dec-17 | 130 | 190 |
| Jan-18 | 102 | |
| Feb-18 | 95 | |
| Mar-18 | 100 | |
| Total | 577 | 442 |

## ಹಳ್ಳಿಗಳಿಗೆ ಒದಗಿಸುತ್ತಿರುವ ಸೇವೆಗಳು

| ವಲಯ | ಒಟ್ಟು ಹಳ್ಳಿಗಳು | ಸೌಲಭ್ಯ ಒದಗಿಸಿರುವ ಹಳ್ಳಿಗಳು | ಶೇ. ಕಾರ್ಯ ವ್ಯಾಪ್ತಿ |
|---|---|---|---|
| ರಾಷ್ಟ್ರೀಕರಣಗೊಂಡ | **7326** | **7319** | **99.9** |
| ರಾಷ್ಟ್ರೀಕರಣಗೊಳ್ಳದ | **13466** | **8774** | **65.2** |
| ಒಟ್ಟು | **20792** | **16093** | **77.4** |

## ಉದ್ಘಾಟನೆಗೆ ಸಿದ್ಧವಿರುವ ಕಾಮಗಾರಿಗಳ ವಿವರ

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು<br>ಬಸ್ ನಿಲ್ದಾಣಗಳು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಕಾಮಗಾರಿ ಮುಕ್ತಾಯಗೊಳ್ಳುವ ಸಂಭವನೀಯ ದಿನಾಂಕ |
|---|---|---|---|
| 1 | ಹೊಸದುರ್ಗ | 250.00 | 30.11.2017 |
| 2 | ಚಳ್ಳಕೆರೆ | 500.00 | 30.11.2017 |
| 3 | ಹನೂರು, ಕೊಳ್ಳೇಗಾಲ ತಾ: | 225.00 | 30.11.2017 |
| 4 | ಕೋಡಿ ಹಳ್ಳಿ, ಕನಕಪುರ ತಾ: | 200.00 | 30.11.2017 |
| 5 | ನಂಜನಗೂಡು | 757.00 | 30.11.2017 |
| 6 | ಕೊಪ್ಪ | 136.00 | 30.11.2017 |
| 7 | ಚುಂಚನಕಟ್ಟೆ | 113.00 | 30.11.2017 |
| ಆ. | ಬಸ್ ಘಟಕ | | |
| 1 | ಕೆ.ಜಿ.ಎಫ್ | 600.00 | 30.11.2017 |

## ಶಂಕುಸ್ಥಾಪನೆಗೆ ಸಿದ್ಧವಿರುವ ಕಾಮಗಾರಿಗಳ ವಿವರ

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಶಿರಾ | 650.00 |
| 2 | ಕೋಲಾರ ನಗರ ಸಾರಿಗೆ ಬ.ನಿ. | 300.00 |
| 3 | ಹಲವಾಗಿಲು | 70.00 |
| 4 | ಕೊಳ್ಳೇಗಾಲ * | 1133.00 |
| ಆ. | ಘಟಕ | |
| 1 | ಶಿಡ್ಲಘಟ್ಟ | 587.00 |